

ಮನೆಯಲ್ಲಿ ಒಂದು ಸಂಚಲನವನ್ನೇ ಸೃಷ್ಟಿಸುತ್ತಿದ್ದವು. ಯಜಮಾನರು ಟವೆಲ್ ಅಥವಾ ಪಂಚೆ ಹಾಕಿ, ನೋವಾಗದಂತೆ ಅವನ್ನು ಹಿಡಿದು ಮನೆಯಿಂದ ಹೊರಗೆ ಕಳಿಸುವುದೂ, ನಾನು ನನ್ನ ಮಗಳೂ ಅಲ್ಲಿ ಬಂತು ಇಲ್ಲಿ ಬಂತು ಎಂದು ಕುಣಿಯುತ್ತಾ ತಲೆ ಮೇಲೆ ದುಪ್ಪಟ್ಟಾ ಹೊದ್ದು ಹಾರಾಡುವುದೂ ಅನೇಕ ಬಾರಿ ಪುನರಾವರ್ತನೆಯಾಗುತ್ತಿತ್ತು. ಹೀಗೆ ಸತತವಾಗಿ ಸುಮಾರು ನಾಲ್ಕೈದು ವರ್ಷಗಳ ಕಾಲ ಹೆಜ್ಜೇನುಗಳು ಗೂಡನ್ನು ನಮ್ಮ ಮನೆಯ ಕಿಟಕಿಯಲ್ಲಿ ಕಟ್ಟುವುದೂ, ಮರಿ ಮಾಡಿ, ಹಾರಿ ಹೋಗಿ ಪುನಃ ಶಿವರಾತ್ರಿ ಆಸುಪಾಸಿನಲ್ಲಿ ಬಂದು ಹೊಸ ಗೂಡು ಕಟ್ಟುವುದೂ ಮಾಡುತ್ತಿದ್ದವು.



ಯಾರಿಗಾದರೂ ನಮ್ಮ ಮನೆಯ ಗುರುತು ಹೇಳುವಾಗ 'ಲೇಔಟಿನಲ್ಲಿ ಒಂದು ಹೆಜ್ಜೇನು ಕಟ್ಟಿದ ಮನೆ ಇದೆ ನೋಡಿ, ಅದೇ ನಮ್ಮನೆ' ಎಂದು ಹೇಳಲು ಹೆಮ್ಮೆ ಎನಿಸುತ್ತಿತ್ತು. ಅನೇಕ ಸಲ ಅವು ಒಂದಕ್ಕೊಂದು ಜಗಳವಾಡಿ ನಮ್ಮ ಅಂಗಳದಲ್ಲಿ ಸತ್ತು ಬಿದ್ದಿರುವುದನ್ನು ನೋಡಿದ ಮಗಳು 'ಅಯ್ಯೋ ಪಾಪ' ಎಂದು ಎತ್ತಿ ಮಣ್ಣಿನೊಳಗೆ ಹಾಕಿ ಅಂತ್ಯಕ್ರಿಯೆ ನೆರವೇರಿಸುತ್ತಿದ್ದಳು. ಒಮ್ಮೆ ಮನೆಗೆ ಬಣ್ಣ ಹೊಡೆಸಬೇಕಾಗಿ ಬಂದಾಗ ಜೇನು ಹೋಗುವವರೆಗೂ ಕಾಯ್ದು ನಂತರ ಹಳೆ ಗೂಡುಗಳನ್ನು ಕೆಡವದೇ ಬಣ್ಣ ಹೊಡೆಸಿದೆವು.

ಒಂದು ದಿನ ನಾನು, ನನ್ನ ಮಗಳು ಮನೆ ತಾರಸಿ ಮೇಲೆ ಆಟವಾಡುತ್ತಾ ಕುಳಿತಿದ್ದಾಗ ಇದ್ದಕ್ಕಿದ್ದಂತೆ ನಮ್ಮ ಮೈ ಮೇಲೆ ಮಳೆ ಹನಿಗಳು ಬಿದ್ದಂತಾಯಿತು. ನೋಡಿದರೆ ಮೈಯೆಲ್ಲಾ ಹಳದಿ ಬಣ್ಣದ ಚಿಕ್ಕ ಚಿಕ್ಕ ಹನಿಗಳು. ಆಶ್ಚರ್ಯವಾಗಿ ತಲೆ ಎತ್ತಿ ನೋಡಿದರೆ, ಸಾವಿರಾರು ಜೇನು ನಮ್ಮ ತಲೆಯ ಮೇಲೆ ಸುತ್ತುತ್ತಿದ್ದವು. ಹಳದಿ ಮಳೆ ನಮ್ಮಿಬ್ಬರ ಮೇಲೆ ಬೀಳುತ್ತಿದ್ದು ಅವುಗಳಿಂದಲೇ ಎಂಬುದು ತಿಳಿಯಿತು. ಇಪ್ಪತ್ತು ಮೂವತ್ತು ಜೇನುಗಳನ್ನು ನೋಡಿ ಅಭ್ಯಾಸವಿದ್ದ ನಮಗೆ ಸಾವಿರಾರು ಜೇನು ತಲೆ ಮೇಲೆ ಹಾರಾಡುವುದು ಕಂಡು ಭಯವಾಯಿತು. ಕೂಡಲೇ ಮನೆ ಒಳಗಡೆ ಓಡಿ ಬಾಗಿಲು ಹಾಕಿಕೊಂಡೆವು. ಕಿಟಕಿ ಕಡೆ ನೋಡಿದಾಗ ಜೇನು ಗೂಡು ಖಾಲಿಯಾಗಿತ್ತು. ಜೇನುಗಳ ಅಂದಿನ ವಿಚಿತ್ರ ವರ್ತನೆಗೆ ಸರಿಯಾದ ಕಾರಣ ನನಗೆ ಇಂದಿಗೂ ತಿಳಿದಿಲ್ಲ. ಯೋಚಿಸಿದರೆ ಅವು ಮರಿ ಮಾಡಿಕೊಳ್ಳಲು ಅನುವು ಮಾಡಿಕೊಟ್ಟದ್ದಕ್ಕೆ ಕೃತಜ್ಞತೆ ಅರ್ಪಿಸಿದಂತೆ ಭಾಸವಾಗುತ್ತದೆ. ಕಳೆದ ವರ್ಷದವರೆಗೂ ಗೂಡು ಕಟ್ಟಿ ಮರಿ ಮಾಡಿ ಹಾರಿ ಹೋಗುತ್ತಿದ್ದ ಜೇನುಗಳು ಈ ಸಾರಿ ಮನೆಯ ಮುಂದಿನ ಹೊಂಗೆ ಮರ ಹೂ ಬಿಟ್ಟಾಗ ಕೂಡ ಒಂದೂ ಬರಲಿಲ್ಲ.

ಅಂದು ಸುಬ್ಬರಾಯರು ಹಾಗೂ ಕೃಷ್ಣಮೂರ್ತಿಯವರ ನಡುವಿನ ಸಂಭಾಷಣೆ ಕೇಳಿದಾಗ ಜೇನುಗಳು ಇನ್ನೇನು ನಮ್ಮ ಮನೆಗೆ ಬರುವ ಸಮಯವಾಯಿತು ಎಂದು ಭಾವಿಸಿದ್ದೆ. ಆದರೆ ಈಗ ಜೇನಿನ ಹರಕು ಗೂಡುಗಳು ಮಾತ್ರವೇ ನಮ್ಮ ಮನೆಯ ಕಿಟಕಿಯಲ್ಲಿವೆ.

ಜೀವ ಕೊಂಡಿಯ ಕೆಳ ಸ್ಥರದಲ್ಲಿ ಇರುವ ಜೇನುಗಳು ಪರಾಗಸ್ಪರ್ಶಕ್ಕೆ ಮಹತ್ತರ ಕೊಡುಗೆ ನೀಡುತ್ತವೆ. ಹಾಗಾಗಿ ನಾವು ತಿನ್ನುವ ಹಣ್ಣು, ತರಕಾರಿಗಳಲ್ಲಿ ಜೇನಿನ ಪಾತ್ರ ಇದ್ದೇ ಇದೆ. ಮನೆಗೆ ಪಾಯ ಎಷ್ಟು ಮುಖ್ಯವೋ ಅಂತೆಯೇ ಜೀವ ಕೊಂಡಿಯ ಕೆಳ ಸ್ಥರದ ಜೀವಿಗಳ ಉಳಿವೂ ಅಷ್ಟೇ ಮುಖ್ಯ.

ಸಾಮಾನ್ಯವಾಗಿ ಜೇನು ಅಥವಾ ಇನ್ನಾವುದೇ ಜೀವಿ ಹಾದಿ ತಪ್ಪಿ ನಮ್ಮ ಮನೆಯೊಳಗೆ ಬಂದರೆ ಕೋಲೋ ಮತ್ತೊಂದೋ ತೆಗೆದು ಬಡಿದು ಕೊಂದಾಗಲೇ ಸಮಾಧಾನಪಡುವ ಪ್ರವೃತ್ತಿ ಇಂದು ನೆನ್ನೆಯದಲ್ಲ. ಇದು ಬಹುಶಃ ಗುಹೆಯಲ್ಲೋ, ಚಿಕ್ಕ ಗುಡಿಸಲಲ್ಲೋ ನಿಸರ್ಗದೊಳಗೊಂದಾಗಿ ಬದುಕುತ್ತಿದ್ದಾಗ ಮಾನವನಲ್ಲಿ ತಳೆದ ಪ್ರವೃತ್ತಿ. ಈಗ ಮನುಷ್ಯನ ವಾಸ ಮನೆಗಳಿಗೆ ಬದಲಾಗಿದೆ. ಆಕಸ್ಮಿಕವಾಗಿ ಯಾವುದೇ ಜೀವಿ ಒಳಗೆ ಬಂದರೆ ನಮಗಿಂತ ಹೆಚ್ಚಿನ ಭಯ ಅವುಗಳಿಗೆ ಉಂಟಾಗಿ, ಇದೊಂದು ಸಲ ಈ ದುಷ್ಟ ಮನುಷ್ಯರ ಸಹವಾಸದಿಂದ ತಪ್ಪಿಸಿಕೊಂಡರೆ ಸಾಕು, ಮತ್ತೊಮ್ಮೆ ಅಪ್ಪಿತಪ್ಪಿಯೂ ಇತ್ತ ಕಡೆ ತಲೆಯೂ ಹಾಕುವುದಿಲ್ಲ ಎನ್ನುವ ಸ್ಥಿತಿಗೆ ಅವು ಬಂದಿರುತ್ತವೆ. ಜೇನುಗಳು, ಎತ್ತರದ ಮರಗಳಿಲ್ಲದೆ ಕಟ್ಟಡಗಳನ್ನು ಆಶ್ರಯಿಸುವುದು ಕಾಣುತ್ತೇವಾದರೂ, ಅಲ್ಲಿಯೂ ಗೂಡಿಗೆ ಹೊಗೆ ಹಾಕಿ ಓಡಿಸುವಾಗ ಮತ್ತೊಮ್ಮೆ ಇಲ್ಲಿ ಕಾಲಿಡಬಾರದೆಂದುಕೊಂಡು ಹಾರುತ್ತವೆ. ಜೇನುಗಳ, ಅದರಲ್ಲೂ ಹೆಜ್ಜೇನುಗಳ ಸಂತತಿ ಇಳಿಮುಖವಾಗಿದೆ ಎಂದು ಇತ್ತೀಚಿನ ಸಮೀಕ್ಷೆಗಳು ಹೇಳುತ್ತವೆ. ಕಾರಣ ಹುಡುಕಿದಾಗ ಅಂತರ್ಜಾಲದಲ್ಲಿ ಆಫ್ರಿಕನ್ ಟ್ಯುಲಿಪ್ ಮರದ ಮಕರಂದ ಜೇನುಗಳಿಗೆ ವಿಷಕಾರಿ ಎಂಬ ಮಾಹಿತಿ ಇತ್ತು.



ಬೆಂಗಳೂರಿನ ತುಂಬಾ ಕಳೆಯಂತೆ ಈ ಮರಗಳನ್ನು ಬೆಳೆಸಲಾಗಿದೆ. ಜೇನು ಸಾಕಣೆ ಮಾಡುವವರೂ ಸಕ್ಕರೆ ಪಾಕವನ್ನು ಹಾಕಿ ಹೆಚ್ಚು ಜೇನು ಪಡೆಯುವ ವಿಧಾನ ಅನುಸರಿಸುವುದರಿಂದ, ಇಲ್ಲದ ಕಾಡನ್ನು ಅರಸಿ ಮಕರಂದಕ್ಕಾಗಿ ಅಲೆಯುವ ಬದಲು ಕೂತಲ್ಲೇ ಸಿಗುವ ಸಕ್ಕರೆಯ ದುರ್ಲಾಭಕ್ಕೆ ಜೇನುಗಳ ಸಂತತಿ ಕ್ಷೀಣಿಸಿರಬಹುದು. ಅಥವಾ ಕಳೆನಾಶಕಗಳ ಮಿತಿ ಮೀರಿದ ಬಳಕೆ ಹೀಗೆ ಇತ್ಯಾದಿ ಅನೇಕ ಕಾರಣಗಳು ಮೇಲ್ನೋಟಕ್ಕೆ ಕಾಣುತ್ತಿವೆಯಾದರೂ ಹೆಚ್ಚಿನ ಸಮೀಕ್ಷೆ, ಸಂಶೋಧನೆಯ ಅವಶ್ಯಕತೆ ಇದೆ. ಸದ್ಯಕ್ಕೆ ಶೂನ್ಯ ಎನಿಸುವ ಹಂತಕ್ಕೆ ಜೇನುಗಳು ಕ್ಷೀಣಿಸಿಲ್ಲ.

ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡುವ ನಾವು, ಪಶ್ಚಿಮ ಘಟ್ಟಗಳ ವಿಸ್ತೃತ ಅಧ್ಯಯನವನ್ನೊಳಗೊಂಡ ಸಂಶೋಧನಾ ವರದಿಗಳನ್ನೇ ಮೂಲೆಗೆಸೆದಿರುವಾಗ ಜೇನುಗಳ ಇರುವಿಕೆ ಇಲ್ಲದಿರುವಿಕೆ ಗಮನಕ್ಕೆ ಬರುವುದು ದೂರದ ಮಾತು. ಮುಂದಿನ ವರ್ಷವಾದರೂ ಜೇನು ಬರಲಿ ಎಂದು ಕಾಯುವುದಷ್ಟೇ ನನಗೆ ಉಳಿದಿದೆ. ಎಲ್ಲವೂ ನನ್ನದೇ ಎಂಬಂತೆ ಪ್ರೀತಿಸಲಿ ಎಂದುಕೊಳ್ಳುತ್ತ, ಸಿನಿಮಾ ಕವಿ ಆರ್.ಎನ್. ಜಯಗೋಪಾಲ್ ಅವರು ರಚಿಸಿದ ಹಾಡು 'ಈ ಮಣ್ಣು ನನ್ನದು, ಈ ಗಾಳಿ ನನ್ನದು...' ಎಂಬುದನ್ನು 'ಕೇವಲ ನನ್ನದಲ್ಲ' ಎಂದು ಅರಿತು ಹಾಡಬೇಕಿದೆ.

**ಪ್ರತಿಕ್ರಿಯಿಸಿ: feedback@sudha.co.in**